ದಿನಾಂಕ 12-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಎಂ. ಆರ್ ವಕೀಲರವರಿಂದಃ

ನಾನು ಅಪಘಾತ ಆದ ದಿನ ನಾನೇ ದ್ವಿ ಚಕ್ರ ವಾಹನವನ್ನು ಚಲಾಯಿಸುತ್ತಿದ್ದೆ . ನಾನು ಪಲಿಮಾರು ಕಡೆಯಿಂದ ಅಡ್ವೆ ಕಡೆಗೆ ಹೋಗುತ್ತಿದ್ದೆ. ನನಗೆ ಅಪಘಾತ ಮಾಡಿರುವ ವಾಹನ ಕೆಎ 07-1865 ಪಲಿಮಾರು ಕಡೆಯಿಂದ ಅಡ್ವೆ ಕಡೆಗೆ ಹೋಗುತ್ತಿತ್ತು . ಬಸ್ಸು ಕೆಎ 19-ಎಡಿ 3703 ಅಡ್ವೆಯಿಂದ ಪಲಿಮಾರು ಕಡೆಗೆ ಬರುತ್ತಿತ್ತು. ನನ್ನ ಜೊತೆ ವಾಹನ ಬರುತ್ತಾ ಇದ್ದದ್ದು ಸ್ಕೂಲ್ ಬಸ್ಸು ಆಗಿತ್ತು. ನಾನು ನಡೆಸುತ್ತಿರುವ ವಾಹನ ಮುಂದಿನ ಬಸ್ಸಿಗೆ ತಾಗಿತ್ತು . ನನ್ನ ಮತ್ತು ಸ್ಕೂಲ್ ಬಸ್ಸು ನಡುವೆ ಎಷ್ಟು ಅಂತರ ಇತ್ತು ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಆದರೆ 100 ಮೀ ಎಂದು ಅಂದಾಜು ಹೇಳಬಹುದು. 2 ನೇ ಎದರುದಾರರು ವಿಮೆ ಇದ್ದ ವಾಹನ ಈ ಅಪಘಾತದಲ್ಲಿ ಯಾವುದೇ ಪಾತ್ರವಿಲ್ಲ ಎಂದರೆ ಸರಿಯಲ್ಲ. ನಾನು ನಡೆಸುತ್ತಿರುವ ವಾಹನ ಅತೀ ವೇಗದಿಂದ ಇರುವ ಕಾರಣ ನನ್ನ ನಿಯಂತ್ರಣ ತಪ್ಪಿ ನಾನೇ ಅಪಘಾತ ಮಾ ಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮತ್ತು ಎದುರಿನಿಂದ ಬರುತ್ತಿದ್ದ ಬಸ್ಸು ಬರುತ್ತಿದ್ದು ಎರಡರ ನಡುವೆ ಅಪಘಾತ ಆಗಿತ್ತು. 2 ನೇ ಎದುರುದಾರರ ಬಸ್ಸಿ ನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಈ ಅಪಘಾತ ಸಂಬಂದಿತ ನಾನು ಪೋಲೀಸ್ ದೂರನ್ನು ನೀಡಿರುತ್ತೇನೆ ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು. ಪಿರ್ಯಾದುದಾರ ಚಂದ್ರಶೇಖರ್ ನನ್ನ ಪರಿಚಯಸ್ಥರು ಎಂದರೆ ಸರಿ. ಅವರನ್ನು 2 ನೇ ಎದರುದಾರರ ವಿರುದ್ದ ಸುಳ್ಳು ದೂರನ್ನು ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಲಾಯಿಸುತ್ತಿರುವ ದ್ವಿಚಕ್ರ ವಾಹನದ ಅನುಮತಿ ಪತ್ರವನ್ನು ನಾನು ರಿನ್ಯೂ ಮಾಡಿಸಿಲ್ಲ ಮಾಡಲು ನೀಡಿರುತ್ತೇನೆ.

ಅಪಘಾತ ಸವಯದಲ್ಲಿ ನನ್ನ ವಾಹನ ಚಾಲನಾ ಪರವಾನಿಗೆ ಚಾಲ್ತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ನನ್ನಲ್ಲಿ ವಾಹನ ಚಾಲನಾ ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. ನಿಪಿ 12 ಮತ್ತು 14 ಈ ಕೇಸಿಗೋಸ್ಕರ ಸೃಷ್ಟಿಮಾಡಿದ ದಾಖಲೆ ಎಂದರೆ ಸರಿಯಲ್ಲ. ನಿಪಿ 12 ಮತ್ತು 14 ದಾಖಲೆಗೂ ನನ್ನ ಅಪಘಾತಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಸಂಪೂರ್ಣ ಚಿಕಿತ್ಸೆ ಆದರ್ಶ ಅಸ್ಪತ್ರೆಯಲ್ಲಿ ಆಗಿದೆ ಇನ್ನೂ ಮುಗಿದಿಲ್ಲ. ಈಗ ನನ್ನ ಚಿಕಿತ್ಸೆ ಸಂಪೂರ್ಣವಾಗಿ ಮುಗಿದಿರುತ್ತದೆ. ಭವಿಷ್ಯದಲ್ಲಿ ಯಾವುದೇ ಚಿಕಿತ್ಸೆ ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ಒಳ ರೋಗಿ ಬಿಲ್ಲು ನಿಪಿ 10 ರಲ್ಲಿ ಕಾಣಿಸಿದ್ದಾರೆ ಎಂದರೆ ಸರಿಯಲ್ಲ. ಸದ್ರಿ ಅಪಘಾತದಿಂದ ನನಗೆ ಯಾವುದೇ ರೀತಿಯ ಅಂಗ ನ್ಯೂನತೆ ಸಂಬವಿಸಿಲ್ಲ ಎಂದರೆ ಸರಿಯಲ್ಲ. ಪ್ರತೀ ದಿನ ನಾನು ನನ್ನ ಚಾಲಕ ವೃತ್ತಿಯಿಂದ 700/- ಸಂಪಾದನೆ ಮಾಡುತ್ತಿದ್ದೆ ಎಂದು ಹೇಳಲು ದಾಖಲೆ ಇದೆ ಹಾಜರು ಪಡಿಸಬಹುದು ಎಂದು ಮುಂದುವರಿದು ನುಡಿಯುತ್ತಾರೆ. ಅಪಘಾತ ಕಾಲಕ್ಕೆ ನನಗೆ ಯಾವುದೇ ರೀತಿಯ ಕೆಲಸ ಹಾಗೂ ಸಂಪಾದನೆ ಇರಲಿಲ್ಲ ಎಂದರೆ ಸರಿಯಲ್ಲ. ಈ ಅಪಘಾತದಿಂದ ನನಗೆ ಯಾವುದೇ ಆರ್ಥಿಕ ತೊಂದರೆ ಸಂಭವಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಓಡಾಟಕ್ಕೆ ಪರಿಚಾರಕರಿಗೆ, ಪೌಷ್ಟಿಕ ಆಹಾರಕ್ಕೆ , ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಅಪಘಾತ ಆಗದ ಕಾರಣ ಮತ್ತು 2 ನೇ ಎದರುದಾರರ ವಿಮೆಗೊಳಪಟ್ಟ ವಾಹನ ಅಪಘಾತದಲ್ಲಿ ಒಳಗೊಂಡದ ಕಾರಣ 2 ನೇ ಎದರುದಾರರು ನನಗೆ ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾಮತ್ತು ಎಂ.ಎ.ಸಿ.ಟಿ. ಉಡುಪಿ.